(ಇಂದು ದಿನಾಂಕ 03.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ವಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-**

ನಾನು ಜಿಗಣಿಯ ವಾಸಿ. ನನ್ನ ಹುಟ್ಟಿದ ಊರು ನೆರಳೂರು. ನಾನು ನನ್ನ ಹೆಂಡತಿಯ ಮನೆಯಲ್ಲಿ ವಾಸ. ನಾನು ಚಾಲಕನಾಗಿದ್ದೆ. ನನ್ನ ವಿರುದ್ಧ ಕ್ರಿಮಿನಲ್ ಪ್ರಕರಣ ಇತ್ತು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನನಗೆ 50 ಬಾಡಿಗೆ ಮನೆಗಳು ಇವೆ ಎಂದು ಹೇಳಿಲ್ಲ. ಪ್ರತಿವಾದಿ ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದರು ಎಂದು ತೋರಿಸಲು ನಮ್ಮ ಹತ್ತಿರ ಬಾಡಿಗೆ ಕರಾರು, ಬಾಡಿಗೆ ರಶೀದಿ ಇಲ್ಲ. ಪ್ರತಿವಾದಿ ನನಗೆ ತಿಂಗಳಿಗೆ 6000 ಬಾಡಿಗೆ ನೀಡುತ್ತಿದ್ದರು ಎಂದು ತೋರಿಸಲು ದಾಖಲೆ ಇಲ್ಲ. ಸಾಕ್ಷಿ ಮುಂದುವರೆದು 2-3 ಬಾರಿ ಫೋನ್ ಪೇ ಮೂಲಕ ಕಳುಹಿಸಿದ್ದಾರೆ ಎನ್ನುತ್ತಾರೆ. ಪ್ರತಿವಾದಿ 2023 ರಿಂದ ಪರಿಚಯ. ಪ್ರತಿವಾದಿ ಖಾಸಗಿ ಸಂಸ್ಥೆಯಲ್ಲಿ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಪ್ರತಿವಾದಿಗೆ ಎಷ್ಟು ಸಂಬಳ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಎಷ್ಟು ಆದಾಯ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ದಿನಾಂಕ 05.12.2023 ರಂದು ಪ್ರತಿವಾದಿ ನನ್ನ ಬಳಿ 5 ಲಕ್ಷ ಸಾಲ ಕೇಳಿದರು. ನನ್ನ ಬಳಿ 5 ಲಕ್ಷ 12 ಸಾವಿರ ಬ್ಯಾಂಕ್ ಖಾತೆಯಲ್ಲಿ ಇತ್ತು. ಒಂದೇ ಸರಿ ಕೊಡಲು ಆಗದ ಕಾರಣ ಬೇರೆಯವರ ಬಳಿ ಪಡೆದು ಆಗಾಗ ನೀಡಿರುತ್ತೇನೆ. ಒಂದೇ ಬಾರಿ ಸಾಲ ಕೊಡಲು ಕೇಳಿದ್ದರು ಆದರೆ ನನಗೆ ನೀಡಲು ಆಗದ ಕಾರಣ ಆಗಾಗ ನೀಡಿರುತ್ತೇನೆ. ನನಗೆ ಪ್ರತಿವಾದಿ ಬಡ್ಡಿ ನೀಡಿಲ್ಲ. ನಾನು ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ಭದ್ರತೆಗಾಗಿ ನಾನು ಯಾವುದೇ ದಾಖಲೆಗಳನ್ನು ಪಡೆದಿರುವುದಿಲ್ಲ. ನಾನು ನೀಡಿದ ಸಾಲವನ್ನು ನಮೂದಿಸಲು ಪುಸ್ತಕ ಇಟ್ಟಿಲ್ಲ. 2 ನೇ ಸರಿ ನೀಡಿದಾಗ ಬಡ್ಡಿ ನೀಡಿಲ್ಲ. ನನಗೆ ಎಲ್ಲಾ ಹಣಕ್ಕೂ ಸೇರಿ 2000 ಬಡ್ಡಿ ನೀಡಿದ್ದಾರೆ. ಬಾಡಿಗೆ ಹಣ ನಗದಾಗಿ ಬರುತ್ತದೆ, ಬ್ಯಾಂಕಿನ ಮೂಲಕವೂ ಬರುತ್ತದೆ. ಪ್ರತಿವಾದಿ ತನ್ನ ಅಗತ್ಯತೆಗಾಗಿ ಹಣವನ್ನು ಕೇಳಿರುತ್ತಾರೆ.

**(ಪ್ರತಿವಾದಿಗಳ ಪರ ವಕೀಲರು ಮುಂದುವರೆದ ವಾಟೀ ಸವಾಲಿಗೆ ಸಮಯಾವಕಾಶ ಕೋರಿದ ಮೇರೆಗೆ ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

**2 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,**
**ಆನೇಕಲ್.**